RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**



| ಭಾಗ–IVA | ಬೆಂಗಳೂರು, ಶನಿವಾರ, ಜನವರಿ ೧೯, ೨೦೧೯ (ಪುಷ್ಯ ೨೯, ಶಕ ವರ್ಷ ೧೯೪೦) | ನಂ. ೫೦ |
|---|---|---|
| **Part–IVA** | ***Bengaluru, Saturday, January 19, 2019 (Pushya 29, Shaka Varsha 1940)*** | **No. 50** |



ಸಂಸದೀಯ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 24 ಶಾಸನ 2018, ಬೆಂಗಳೂರು, ದಿನಾಂಕ: 19–01–2019**

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2018 ಕ್ಕೆ 2019ರ ಜನವರಿ ತಿಂಗಳ ಹದಿನೆಂಟನೇ ದಿನಾಂಕದಂದು ಮಾನ್ಯ ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 03 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 3**

(2019ರ ಜನವರಿ 19ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2018**

(2019ರ ಜನವರಿ 18ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ನ್ನು (2017ರ ಕರ್ನಾಟಕ ಅಧಿನಿಯಮ 27)ನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ನ್ನು (2017ರ ಕರ್ನಾಟಕ ಅಧಿನಿಯಮ 27) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**–(1) ಈ ಅಧಿನಿಯಮವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಸರ್ಕಾರವು ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭದ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಬಂದ ಉಲ್ಲೇಖವನ್ನಾಗಿ ಅರ್ಥೈಸತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.**– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,–

(1) ಖಂಡ (4)ರಲ್ಲಿ "ಅಪೀಲು ಪ್ರಾಧಿಕಾರ ಮತ್ತು ಅಪೀಲು ನ್ಯಾಯಾಧಿಕರಣಗಳನ್ನು" ಎಂಬ ಪದಗಳಿಗೆ, "ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಮತ್ತು ಪ್ರಕರಣ 171ರ ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರವನ್ನು" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(2) ಖಂಡ (16)ರಲ್ಲಿ "ಕೇಂದ್ರ ಅಬಕಾರಿ ಮತ್ತು ಸೀಮಾಸುಂಕ ಮಂಡಳಿ" ಎಂಬ ಪದಗಳಿಗೆ, "ಕೇಂದ್ರ ಪರೋಕ್ಷ ತೆರಿಗೆಗಳ ಮತ್ತು ಸೀಮಾಸುಂಕ ಮಂಡಳಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(3) ಖಂಡ (17)ರಲ್ಲಿ, ಉಪಖಂಡ (ಎಚ್)ಗೆ, ಈ ಕೆಳಕಂಡ ಉಪಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಚ್) ಟೋಟಲೈಸೇಟರ್ ಮೂಲಕ ಅಥವಾ ಬುಕ್ ಮೇಕರನಿಗೆ ನೀಡಲಾದ ಪರವಾನಿಗೆಯ ಮೂಲಕವೂ ಒಳಗೊಂಡಂತೆ ರೇಸ್ ಕ್ಲಬ್‌ನ ಚಟುವಟಿಕೆಗಳು ಅಥವಾ ಅಂಥ ಕ್ಲಬ್‌ನಲ್ಲಿ ಪರವಾನಗಿ ಪಡೆದ ಬುಕ್ ಮೇಕರನ ಚಟುವಟಿಕೆಗಳು; ಮತ್ತು";

(4) ಖಂಡ (18)ನ್ನು ಬಿಟ್ಟುಬಿಡತಕ್ಕದ್ದು;

(5) ಖಂಡ (35)ರಲ್ಲಿ "ಖಂಡ (ಸಿ)" ಎಂಬ ಪದ, ಆವರಣ ಚಿಹ್ನೆ ಮತ್ತು ಅಕ್ಷರಕ್ಕೆ, "ಖಂಡ (ಬಿ)" ಎಂಬ ಪದ, ಆವರಣ ಚಿಹ್ನೆ ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು;

(6) ಖಂಡ (69)ರ, ಉಪಖಂಡ (ಎಫ್)ನಲ್ಲಿ "ಅನುಚ್ಛೇದ 371ರ" ಎಂಬ ಪದ ಮತ್ತು ಅಂಕಿಗಳ, ತರುವಾಯ "ಮತ್ತು ಅನುಚ್ಛೇದ 371ಜೆಯ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು;

(7) ಖಂಡ (102)ರಲ್ಲಿ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:-

"**ವಿವರಣೆ.**-ಸಂದೇಹಗಳ ನಿವಾರಣೆಗಾಗಿ, "ಸೇವೆಗಳು" ಎಂಬ ಪದಾವಳಿಯಲ್ಲಿ ಭದ್ರತೆಗಳಲ್ಲಿನ ವ್ಯವಹಾರಗಳಿಗೆ ಅನುಕೂಲ ಅಥವಾ ವ್ಯವಸ್ಥೆ ಮಾಡಿಕೊಡುವುದನ್ನು ಒಳಗೊಳ್ಳುತ್ತದೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ;".

**3. 7ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ ಪ್ರಕರಣ 7ರಲ್ಲಿ, 2017ರ ಜುಲೈ ಮೊದಲನೇ ದಿನದಿಂದ ಜಾರಿಗೆ ಬರುವಂತೆ,-

(1) ಉಪ ಪ್ರಕರಣ (1)ರಲ್ಲಿ,-

(ಎ) ಖಂಡ (ಬಿ)ಯಲ್ಲಿ, "ಪ್ರತಿಫಲಕ್ಕಾಗಿ ಮಾಡಿದ ಸೇವೆಗಳ ಆಮದು;" ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯ ತರುವಾಯ "ಮತ್ತು" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಖಂಡ (ಸಿ)ಯಲ್ಲಿ, "ನಿರ್ಧಿಷ್ಟಪಡಿಸಿದ ಚಟುವಟಿಕೆಗಳು;" ಎಂಬ ಪದಗಳ ನಂತರದ "ಮತ್ತು" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು ಮತ್ತು ಯಾವಾಗಲೂ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು;

(ಸಿ) ಖಂಡ (ಡಿ)ಯನ್ನು ಬಿಟ್ಟುಬಿಡತಕ್ಕದ್ದು ಮತ್ತು ಯಾವಾಗಲೂ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು;

(2) ಉಪ ಪ್ರಕರಣ (1)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಮತ್ತು ಯಾವಾಗಲೂ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:-

"(1ಎ) ಕೆಲವು ಚಟುವಟಿಕೆಗಳು ಅಥವಾ ವ್ಯವಹಾರಗಳು ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಪೂರೈಕೆ ಎಂದು ಸ್ಥಾಪಿತವಾಗುವಂತಿದ್ದಲ್ಲಿ, ಅವುಗಳನ್ನು ಅನುಸೂಚಿ II ರಲ್ಲಿ ಉಲ್ಲೇಖಿಸಿದಂತೆ ಸರಕುಗಳ ಪೂರೈಕೆ ಎಂದಾಗಲಿ ಅಥವಾ ಸೇವೆಗಳ ಪೂರೈಕೆ ಎಂದಾಗಲಿ ಪರಿಗಣಿಸತಕ್ಕದ್ದು.";

(3) ಉಪಪ್ರಕರಣ (3)ರಲ್ಲಿ "ಉಪಪ್ರಕರಣ (1) ಮತ್ತು (2)" ಎಂಬ ಪದಗಳು, ಆವರಣ ಚಿಹ್ನೆಗಳು, ಮತ್ತು ಸಂಖ್ಯೆಗಳಿಗೆ, "ಉಪಪ್ರಕರಣ (1), (1ಎ) ಮತ್ತು (2)" ಎಂಬ ಪದಗಳು, ಆವರಣ ಚಿಹ್ನೆಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

**4. 9ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ ಪ್ರಕರಣ 9ರಲ್ಲಿ, ಉಪಪ್ರಕರಣ (4)ಕ್ಕೆ, ಈ ಮುಂದಿನ ಉಪಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(4) ಒಬ್ಬ ನೋಂದಾಯಿತನಲ್ಲದ ಪೂರೈಕೆದಾರನಿಂದ, ಸ್ವೀಕರಿಸಿದ ನಿರ್ದಿಷ್ಟಪಡಿಸಿದ ವರ್ಗಗಳ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವವನಾಗಿ, ಅವುಗಳ ಮೇಲೆ ತೆರಿಗೆಯನ್ನು ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ, ಸಂದಾಯ ಮಾಡುವಂತಹ ನೋಂದಾಯಿತ ವ್ಯಕ್ತಿಗಳ ವರ್ಗಗಳನ್ನು ಪರಿಷತ್ತಿನ ಶಿಫಾರಸ್ಸಿನ ಮೇಲೆ, ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು ಮತ್ತು ಆ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಅಂಥ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಪಾವತಿಸಲು ಬಾಧ್ಯತೆಯುಳ್ಳ ವ್ಯಕ್ತಿಯಾಗಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವವನಿಗೆ ಅನ್ವಯವಾಗತಕ್ಕದ್ದು."

**5. 10ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ ಪ್ರಕರಣ 10ರಲ್ಲಿ,

(1) ಉಪಪ್ರಕರಣ (1)ರಲ್ಲಿ–

(ಎ) "ಸಂದಾಯ ಮಾಡಬೇಕಾದ ತೆರಿಗೆಯ ಬದಲು, ನಿಯಮಿಸಬಹುದಾದ ಅಂಥ ದರದಲ್ಲಿ ಲೆಕ್ಕಹಾಕಲಾದ" ಎಂಬ ಪದಗಳಿಗೆ "ಪ್ರಕರಣ 9ರ ಉಪಪ್ರಕರಣ (1)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ಬದಲು, ನಿಯಮಿಸಬಹುದಾದ ಅಂಥ ದರದಲ್ಲಿ ಲೆಕ್ಕಹಾಕಲಾದ ತೆರಿಗೆಯ ಮೊತ್ತ," ಎಂಬ ಪದಗಳು, ಆವರಣ ಚಿಹ್ನೆಗಳು, ಅಂಕಿಗಳನ್ನು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಪರಂತುಕದಲ್ಲಿ, "ಒಂದು ಕೋಟಿ ರೂಪಾಯಿಗಳನ್ನು" ಎಂಬ ಪದಗಳಿಗೆ "ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ)ಯ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳುವ ವ್ಯಕ್ತಿಯು, ಹಿಂದಿನ ಹಣಕಾಸು ವರ್ಷದಲ್ಲಿ ರಾಜ್ಯದೊಳಗಿನ ವಹಿವಾಟಿನ ಶೇಕಡ ಹತ್ತು ಅಥವಾ ಐದು ಲಕ್ಷ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚೋ, ಅದನ್ನು ಮೀರದ ಮೌಲ್ಯದ ಸೇವೆಗಳನ್ನು (ಅನುಸೂಚಿ IIರ ಖಂಡಿಕೆ 6ರ ಖಂಡ (ಬಿ)ಯಲ್ಲಿ ಉಲ್ಲೇಖಿಸಿರುವವನ್ನು ಹೊರತುಪಡಿಸಿದಂತೆ) ಪೂರೈಕೆ ಮಾಡಬಹುದು.";

(2) ಉಪಪ್ರಕರಣ (2)ರಲ್ಲಿ, ಖಂಡ (ಎ)ಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ) ಉಪಪ್ರಕರಣ (1)ರಲ್ಲಿ ಉಪಬಂಧಿಸಿದುದನ್ನುಳಿದು, ಅವನು ಸೇವೆಗಳ ಪೂರೈಕೆಯಲ್ಲಿ ತೊಡಗಿರಬಾರದು;".

**6. 12ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ ಪ್ರಕರಣ 12ರ, ಉಪಪ್ರಕರಣ (2)ರ, ಖಂಡ (ಎ)ನಲ್ಲಿ, "ಉಪಪ್ರಕರಣ (1)ರ" ಎಂಬ ಪದಗಳು, ಆವರಣ ಚಿಹ್ನೆಗಳು, ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

**7. 13ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ ಪ್ರಕರಣ 13ರ, ಉಪಪ್ರಕರಣ (2)ರಲ್ಲಿ, ಖಂಡ(ಎ) ಮತ್ತು ಖಂಡ (ಬಿ)ಯಲ್ಲಿ "ಉಪಪ್ರಕರಣ (2)ರ" ಎಂಬ ಪದಗಳು, ಆವರಣ ಚಿಹ್ನೆಗಳು, ಮತ್ತು ಅಂಕಿಯನ್ನು ಬಿಟ್ಟುಬಿಡತಕ್ಕದ್ದು.

**8. 16ನೇ ಪ್ರಕರಣದ ತಿದ್ದುಪಡಿ.–**ಮೂಲ ಅಧಿನಿಯಮದ ಪ್ರಕರಣ 16ರ, ಉಪಪ್ರಕರಣ (2)ರಲ್ಲಿ,–

(1) ಖಂಡ(ಬಿ)ಯಲ್ಲಿ, ವಿವರಣೆಗೆ, ಈ ಮುಂದಿನ ವಿವರಣೆಯನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**ವಿವರಣೆ:–** ಈ ಖಂಡದ ಉದ್ದೇಶಗಳಿಗಾಗಿ,–

(i) ಪೂರೈಕೆದಾರನಿಂದ, ಸ್ವೀಕರಿಸುವವನಿಗೆ ಅಥವಾ ಅಂತಹ ನೋಂದಾಯಿತ ವ್ಯಕ್ತಿಯ ನಿರ್ದೇಶನದ ಮೇಲೆ ಏಜೆಂಟ್ ಆಗಿಯಾದರೂ ಅಥವಾ ಅನ್ಯಥಾ ಆಗಿಯಾದರೂ ಕಾರ್ಯನಿರ್ವಹಿಸುವ ಯಾವುದೇ ಇತರ ವ್ಯಕ್ತಿಗೆ, ಸರಕುಗಳ ಸಾಗಾಣಿಕೆಯ ಮುನ್ನ ಅಥವಾ ಸಮಯದಲ್ಲಿ, ಸರಕುಗಳ ಸ್ವಾಮ್ಯದ ದಸ್ತಾವೇಜುಗಳ ವರ್ಗಾವಣೆಯ ಮೂಲಕವಾಗಲಿ ಅಥವಾ ಅನ್ಯಥಾ ಆಗಲಿ, ಸರಕುಗಳನ್ನು ಬಟವಾಡೆ ಮಾಡಿದ್ದಾಗ;

(ii) ಪೂರೈಕೆದಾರನು ಯಾವುದೇ ವ್ಯಕ್ತಿಗೆ, ಅಂಥ ನೋಂದಾಯಿತ ವ್ಯಕ್ತಿಯ ಸರಕುಗಳನ್ನು ಸ್ವೀಕರಿಸಿದ್ದಾನೆಂದು ನಿರ್ದೇಶನದ ಮೇರೆಗೆ ಆತನ ಪರವಾಗಿ ಸೇವೆಗಳನ್ನು ಒದಗಿಸಿದ್ದಾಗ,

–ನೋಂದಾಯಿತ ವ್ಯಕ್ತಿಯು ಸರಕುಗಳನ್ನು ಅಥವಾ ಸಂದರ್ಭಾನುಸಾರವಾಗಿ ಸೇವೆಗಳನ್ನು ಸ್ವೀಕರಿಸಿದ್ದಾನೆಂದು ಭಾವಿಸತಕ್ಕದ್ದು;"

(2) ಖಂಡ (ಸಿ)ಯಲ್ಲಿ, "ಪ್ರಕರಣ 41ರ" ಎಂಬ ಪದ ಮತ್ತು ಅಂಕಿಗಳಿಗೆ, "ಪ್ರಕರಣ 41ರ ಅಥವಾ ಪ್ರಕರಣ 43ಎ ಯ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು.

**9. 17ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ ಪ್ರಕರಣ 17ರಲ್ಲಿ,

(1) ಉಪಪ್ರಕರಣ (3)ರಲ್ಲಿ, ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:–

"**ವಿವರಣೆ.**– ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ವಿನಾಯಿತಿ ಪೂರೈಕೆಯ ಮೌಲ್ಯವು" ಎಂಬ ಪದಾವಳಿಯು ಅನುಸೂಚಿ IIIರಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳ ಅಥವಾ ವ್ಯವಹಾರಗಳ ಮೌಲ್ಯವನ್ನು, ಸದರಿ ಅನುಸೂಚಿಯ ಖಂಡಿಕೆ 5ರಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿದಂತೆ, ಒಳಗೊಳ್ಳತಕ್ಕದ್ದಲ್ಲ.";

(2) ಉಪಪ್ರಕರಣ (5)ರಲ್ಲಿ, ಖಂಡ (ಎ) ಮತ್ತು (ಬಿ)ಗಳಿಗೆ, ಈ ಮುಂದಿನ ಖಂಡಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ) ಹದಿಮೂರು ವ್ಯಕ್ತಿಗಳಿಗಿಂತ (ಚಾಲಕನನ್ನು ಒಳಗೊಂಡಂತೆ) ಹೆಚ್ಚಿನದಲ್ಲದ ಆಸನದ ಸಾಮರ್ಥ್ಯದ ಅನುಮೋದನೆಯನ್ನು ಹೊಂದಿರುವ, ವ್ಯಕ್ತಿಗಳ ಸಾಗಾಣಿಕೆಯ ಮೋಟಾರು ವಾಹನಗಳು, ಈ ಕೆಳಗಿನವುಗಳಿಗಾಗಿ ಕೆಳಕಂಡ ತೆರಿಗೆದಾಯಕ ಪೂರೈಕೆಗಳನ್ನು ಮಾಡಲು, ಬಳಕೆಯಾದಾಗ ಹೊರತುಪಡಿಸಿದಂತೆ, ಎಂದರೆ:–

(ಅ) ಅಂಥ ಮೋಟಾರು ವಾಹನಗಳ ಮುಂದುವರೆದ ಪೂರೈಕೆ; ಅಥವಾ

(ಆ) ಪ್ರಯಾಣಿಕರ ಸಾಗಾಣಿಕೆ; ಅಥವಾ

(ಇ) ಅಂಥ ಮೋಟಾರು ವಾಹನಗಳ ಚಾಲನಾ ತರಬೇತಿಯನ್ನು ನೀಡುವುದು;

(ಎಎ) ನೌಕೆಗಳು ಮತ್ತು ವಿಮಾನ ಈ ಕೆಳಗಿನವುಗಳಿಗಾಗಿ ಬಳಕೆಯಾದಾಗ ಹೊರತುಪಡಿಸಿದಂತೆ:–

(i) ಕೆಳಕಂಡ ತೆರಿಗೆದಾಯಕ ಪೂರೈಕೆಗಳನ್ನು ಮಾಡಲು, ಎಂದರೆ:–

(ಎ) ಅಂಥ ನೌಕೆಗಳು ಮತ್ತು ವಿಮಾನಗಳ ಮುಂದುವರೆದ ಪೂರೈಕೆ; ಅಥವಾ

(ಬಿ) ಪ್ರಯಾಣಿಕರ ಸಾಗಾಣಿಕೆ; ಅಥವಾ

(ಸಿ) ಅಂಥ ನೌಕೆಗಳ ಯಾನದ ಕೌಶಲ್ಯಗಳ ತರಬೇತಿಯನ್ನು ನೀಡುವುದು; ಅಥವಾ

(ಡಿ) ಅಂಥ ವಿಮಾನದ ಹಾರಾಟ ಕೌಶಲ್ಯಗಳ ತರಬೇತಿಯನ್ನು ನೀಡುವುದು.

(ii) ಸರಕು ಸಾಗಾಣಿಕೆಗಾಗಿ;

(ಎಬಿ) ಖಂಡ (ಎ) ಅಥವಾ ಖಂಡ(ಎಎ)ನಲ್ಲಿ ಉಲ್ಲೇಖಿಸಿರುವ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳಿಗೆ ಸಂಬಂಧಿಸಿದುದರಷ್ಟರ ಮಟ್ಟಿಗೆ ಸಾಮಾನ್ಯ ವಿಮೆ, ಸೇವೆ ನೀಡುವಿಕೆ, ದುರಸ್ತಿ ಕಾರ್ಯ ಮತ್ತು ನಿರ್ವಹಣಾ ಸೇವೆಗಳು:

ಪರಂತು, ಅಂಥ ಸೇವೆಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯು ಕೆಳಕಂಡಂತಿದ್ದಾಗ ಲಭ್ಯವಿರತಕ್ಕದ್ದು,–

(i) ಖಂಡ (ಎ) ಅಥವಾ ಖಂಡ(ಎಎ)ನಲ್ಲಿ ಉಲ್ಲೇಖಿಸಿರುವ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳು ಅದರಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳಿಗಾಗಿ ಬಳಕೆಯಾಗಿದ್ದಲ್ಲಿ;

(ii) ಕೆಳಕಂಡವುಗಳಲ್ಲಿ ತೊಡಗಿಕೊಂಡಿರುವ ತೆರಿಗೆದಾಯಕ ವ್ಯಕ್ತಿಯಿಂದ ಸ್ವೀಕೃತವಾಗಿದ್ದಲ್ಲಿ,–

(I) ಅಂಥ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳ ತಯಾರಿಕೆಯಲ್ಲಿ; ಅಥವಾ

(II) ಆತನಿಂದ ವಿಮೆ ಮಾಡಲಾದ ಅಂಥ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳಿಗೆ ಸಂಬಂಧಿಸಿದ ಸಾಮಾನ್ಯ ವಿಮೆಯ ಪೂರೈಕೆಯಲ್ಲಿ;

(ಬಿ) ಈ ಕೆಳಕಂಡ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ:-

(i) ಆಹಾರ ಮತ್ತು ಪಾನೀಯಗಳು, ಹೊರಾಂಗಣ ಆಹಾರ ಸರಬರಾಜು, ಸೌಂದರ್ಯಚಿಕಿತ್ಸೆ, ಆರೋಗ್ಯ ಸೇವೆಗಳು, ಸೌಂದರ್ಯವರ್ಧಕ ಮತ್ತು ಸುರೂಪಿಕಾ ಶಸ್ತ್ರಚಿಕಿತ್ಸೆ (plastic surgery), ಖಂಡ (ಎ) ಅಥವಾ ಖಂಡ(ಎಎ)ನಲ್ಲಿ ಉಲ್ಲೇಖಿಸಿರುವ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳನ್ನು ಭೋಗ್ಯಕ್ಕೆ, ಗೇಣಿಗೆ ಅಥವಾ ಬಾಡಿಗೆಗೆ ನೀಡುವುದು, ಅದರಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳಿಗಾಗಿ ಬಳಕೆಯಾಗುವುದನ್ನು ಹೊರತುಪಡಿಸಿದಂತೆ, ಜೀವ ವಿಮೆ ಮತ್ತು ಆರೋಗ್ಯ ವಿಮೆ:

ಪರಂತು, ಒಬ್ಬ ನೋಂದಾಯಿತ ವ್ಯಕ್ತಿಯಿಂದ ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಂದು ಒಳಮುಖ ಪೂರೈಕೆಯನ್ನು, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ತೆರಿಗೆದಾಯಕ ಪೂರೈಕೆಯನ್ನು ಮಾಡಲು ಅಥವಾ ತೆರಿಗೆದಾಯಕ ಸಂಯುಕ್ತ ಅಥವಾ ಮಿಶ್ರ ಪೂರೈಕೆಯ ಭಾಗವಾಗಿ ಬಳಸಿದಲ್ಲಿ, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆ ಲಭ್ಯವಿರತಕ್ಕದ್ದು;

(ii) ಒಂದು ಕ್ಲಬ್, ಆರೋಗ್ಯ ಹಾಗೂ ಫಿಟ್ನೆಸ್ ಕೇಂದ್ರದ ಸದಸ್ಯತ್ವ; ಮತ್ತು

(iii) ರಜೆಯಲ್ಲಿರುವ ಉದ್ಯೋಗಿಗಳಿಗೆ ನೀಡಲಾದ ರಜೆ ಪ್ರಯಾಣದ ರಿಯಾಯಿತಿ ಅಥವಾ ಸ್ವಗ್ರಾಮ ಪ್ರಯಾಣ ರಿಯಾಯಿತಿಯಂತಹ ಪ್ರಯಾಣದ ಅನುಕೂಲತೆಗಳು:

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಉದ್ಯೋಗದಾತನು ತನ್ನ ಉದ್ಯೋಗಿಗಳಿಗೆ ಒದಗಿಸಲು ಬಾಧ್ಯವಿರುವಂತಹ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆ ಲಭ್ಯವಿರತಕ್ಕದ್ದು."

**10. 20ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ ಪ್ರಕರಣ 20ರ, (2)ನೇ ಉಪಪ್ರಕರಣದ ವಿವರಣೆಯಲ್ಲಿನ, ಖಂಡ(ಸಿ)ಯಲ್ಲಿ, "84ನೇ ನಮೂದು" ಎಂಬ ಪದಗಳು ಮತ್ತು ಅಂಕಿಗಳಿಗೆ, "84ನೇ ಮತ್ತು 92ಎ ನಮೂದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

**11. 22ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 22ನೇ ಪ್ರಕರಣದಲ್ಲಿ,-

(1) ಉಪಪ್ರಕರಣ (1)ರಲ್ಲಿ, ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ಅಂಥ ವ್ಯಕ್ತಿಯು ವಿಶೇಷ ಪ್ರವರ್ಗದ ರಾಜ್ಯದಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆ ಮಾಡಿದಲ್ಲಿ, ಮೊದಲನೇ ಪರಂತುಕದಲ್ಲಿ ಉಲ್ಲೇಖಿಸಿದ ಸಮಗ್ರ ವಹಿವಾಟನ್ನು ಕೇಂದ್ರ ಸರ್ಕಾರವು ಹೆಚ್ಚಿಸಿದಾಗ ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಅಂಥ ಹೆಚ್ಚಿಸಿದ ವಹಿವಾಟಿನ ಸಮಾನ ಮೊತ್ತವನ್ನು ಮೀರಿದರೆ, ಆತನು ನೋಂದಣಿಗೆ ಬಾಧ್ಯನಾಗತಕ್ಕದ್ದು.";

(2) ವಿವರಣೆಯಲ್ಲಿನ, ಖಂಡ (iii) ರಲ್ಲಿ, "ಪದಾವಳಿಯು," ಎಂಬ ಪದದ ಮತ್ತು ಅಲ್ಪವಿರಾಮ ಚಿಹ್ನೆಯ ತರುವಾಯ "ಜಮ್ಮು ಮತ್ತು ಕಾಶ್ಮೀರ ರಾಜ್ಯ ಹಾಗೂ ಅರುಣಾಚಲ ಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಮೇಘಾಲಯ, ಸಿಕ್ಕಿಂ ಮತ್ತು ಉತ್ತರಾಖಂಡ ರಾಜ್ಯಗಳನ್ನು ಹೊರತುಪಡಿಸಿದಂತೆ," ಎಂಬ ಪದಗಳನ್ನು ಸೇರಿಸತಕ್ಕದ್ದು.

**12. 24ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ ಪ್ರಕರಣ 24ರಲ್ಲಿ, ಖಂಡ (x)ರಲ್ಲಿ, "ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ" ಎಂಬ ಪದಗಳಿಗೆ ಮೊದಲು "ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿರುವ" ಎಂಬ ಪದಗಳು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

**13. 25ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ ಪ್ರಕರಣ 25ರಲ್ಲಿ,-

(1) ಉಪಪ್ರಕರಣ (1)ರಲ್ಲಿ, ಪರಂತುಕದ ತರುವಾಯ ಹಾಗೂ ವಿವರಣೆಗಿಂತ ಮೊದಲು, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ವಿಶೇಷ ಆರ್ಥಿಕ ವಲಯಗಳ ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ 28)ರಲ್ಲಿ ಪರಿಭಾಷಿಸಿದಂತೆ, ವಿಶೇಷ ಆರ್ಥಿಕ ವಲಯದಲ್ಲಿ ಒಂದು ಘಟಕವನ್ನು ಹೊಂದಿರುವ ಅಥವಾ ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರನಾದ ವ್ಯಕ್ತಿಯು ರಾಜ್ಯದಲ್ಲಿರುವ ವಿಶೇಷ ಆರ್ಥಿಕ ವಲಯದ ಹೊರಗೆ ಇರುವ ಅವನ ವ್ಯವಹಾರ ಸ್ಥಳಕ್ಕಿಂತ ಭಿನ್ನವಾಗಿ, ಒಂದು ಪ್ರತ್ಯೇಕ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.";

(2) ಉಪಪ್ರಕರಣ (2)ರಲ್ಲಿ, ಪರಂತುಕಕ್ಕೆ, ಈ ಮುಂದಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು, ರಾಜ್ಯದಲ್ಲಿ ಅನೇಕ ವ್ಯವಹಾರ ಸ್ಥಳಗಳನ್ನು ಹೊಂದಿರುವ ಒಬ್ಬ ವ್ಯಕ್ತಿಯ, ಅಂಥ ಪ್ರತಿಯೊಂದು ವ್ಯವಹಾರ ಸ್ಥಳಕ್ಕೆ, ಪ್ರತ್ಯೇಕವಾದ ನೋಂದಣಿಯನ್ನು, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ನೀಡಬಹುದು."

**14. 29ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 29ರಲ್ಲಿ,-

(1) ಶೀರ್ಷಿಕೆಯಲ್ಲಿ, "ರದ್ದುಪಡಿಸುವಿಕೆ" ಎಂಬ ಪದದ ತರುವಾಯ, "ಅಥವಾ ಅಮಾನತ್ತು ಪಡಿಸುವಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(2) ಉಪಪ್ರಕರಣ (1)ರಲ್ಲಿ, ಖಂಡ (ಸಿ)ಯ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ನೋಂದಾಯಿತ ವ್ಯಕ್ತಿಯಿಂದ ಸಲ್ಲಿಕೆಯಾದ ನೋಂದಣಿಯ ರದ್ದುಪಡಿಸುವಿಕೆಗೆ ಸಂಬಂಧಿಸಿದ ನಡಾವಳಿಯು ಇತ್ಯರ್ಥದಲ್ಲಿರುವ ಸಮಯದಲ್ಲಿ, ನೋಂದಣಿಯನ್ನು ನಿಯಮಿಸಬಹುದಾದ ಅಂಥ ಅವಧಿಗಾಗಿ ಮತ್ತು ಅಂಥ ವಿಧಾನದಲ್ಲಿ ಅಮಾನತ್ತಿನಲ್ಲಿಡಬಹುದು.";

(3) ಉಪಪ್ರಕರಣ (2)ರಲ್ಲಿ, ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನೋಂದಣಿಯ ರದ್ದುಪಡಿಸುವಿಕೆಗೆ ಸಂಬಂಧಿಸಿದ ನಡಾವಳಿಯು ಇತ್ಯರ್ಥದಲ್ಲಿರುವ ಸಮಯದಲ್ಲಿ, ಯುಕ್ತ ಅಧಿಕಾರಿಯು, ನೋಂದಣಿಯನ್ನು ನಿಯಮಿಸಬಹುದಾದ ಅಂಥ ಅವಧಿಗಾಗಿ ಮತ್ತು ಅಂಥ ವಿಧಾನದಲ್ಲಿ ಅಮಾನತ್ತಿನಲ್ಲಿಡಬಹುದು.",

**15. 34ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 34ರಲ್ಲಿ,-

(1) ಉಪಪ್ರಕರಣ (1)ರಲ್ಲಿ,-

(ಎ) "ಒಂದು ತೆರಿಗೆ ಬೆಲೆಪಟ್ಟಿಯನ್ನು" ಎಂಬ ಪದಗಳಿಗೆ, "ಒಂದು ಅಥವಾ ಅದಕ್ಕಿಂತ ಹೆಚ್ಚು ತೆರಿಗೆ ಬೆಲೆಪಟ್ಟಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಒಂದು ಜಮೆ ಚೀಟಿಯನ್ನು" ಎಂಬ ಪದಗಳಿಗೆ, ",ಒಂದು ಹಣಕಾಸು ವರ್ಷದಲ್ಲಿ ಮಾಡಿದ ಪೂರೈಕೆಗಳಿಗಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ಜಮೆ ಚೀಟಿಗಳನ್ನು" ಎಂಬ ಪದಗಳನ್ನು ಅಲ್ಪವಿರಾಮ ಚಿಹ್ನೆಯೊಂದಿಗೆ ಪ್ರತಿಯೋಜಿಸತಕ್ಕದ್ದು;

(2) ಉಪಪ್ರಕರಣ (3)ರಲ್ಲಿ,-

(ಎ) "ಒಂದು ತೆರಿಗೆ ಬೆಲೆಪಟ್ಟಿಯನ್ನು" ಎಂಬ ಪದಗಳಿಗೆ, "ಒಂದು ಅಥವಾ ಅದಕ್ಕಿಂತ ಹೆಚ್ಚು ತೆರಿಗೆ ಬೆಲೆಪಟ್ಟಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಒಂದು ಖರ್ಚು ಚೀಟಿಯನ್ನು" ಎಂಬ ಪದಗಳಿಗೆ, "ಒಂದು ಹಣಕಾಸು ವರ್ಷದಲ್ಲಿ ಮಾಡಿದ ಪೂರೈಕೆಗಳಿಗಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ಖರ್ಚು ಚೀಟಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**16. 35ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ ಪ್ರಕರಣ 35ರ, ಉಪಪ್ರಕರಣ (5)ರಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್-ಜನರಲ್‌ರವರಿಂದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಳೀಯ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗಾಗಿ ನೇಮಕವಾದ ಒಬ್ಬ ಲೆಕ್ಕಪರಿಶೋಧಕನಿಂದ, ಅವುಗಳ ಲೆಕ್ಕಪತ್ರದ ಪುಸ್ತಕಗಳ

ಲೆಕ್ಕಪರಿಶೋಧನೆಯ ನಿಬಂಧನೆಗೆ ಒಳಪಟ್ಟಿರುವ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವುದೇ ಇಲಾಖೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅನ್ವಯಿಸತಕ್ಕದ್ದಲ್ಲ.".

**17. 39ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 39ರಲ್ಲಿ,-

(1) ಉಪಪ್ರಕರಣ (1)ರಲ್ಲಿ,-

(ಎ) "ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ" ಎಂಬ ಪದಗಳಿಗೆ, "ನಿಯಮಿಸಬಹುದಾದ ಅಂಥ ನಮೂನೆ, ವಿಧಾನ ಮತ್ತು ಅಂಥ ಸಮಯದೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಅಂಥ ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗದ ತದನಂತರ ಬರುವ ತಿಂಗಳಿನ ಇಪ್ಪತ್ತನೇ ದಿನದಂದು ಅಥವಾ ಅದಕ್ಕಿಂತ ಮೊದಲು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು, ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ ರಿಟರ್ನ್‌ನ್ನು ಒದಗಿಸಬೇಕಿರುವ ನೋಂದಾಯಿತ ವ್ಯಕ್ತಿಗಳ ಕೆಲವು ವರ್ಗಗಳನ್ನು ಅಧಿಸೂಚಿಸಬಹುದು.";

(2) ಉಪಪ್ರಕರಣ (7)ರಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು,ಅಂಥ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅವನು ಅಂತಹ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ಅಂಥ ರಿಟರ್ನ್‌ನ ಪ್ರಕಾರ ಬಾಕಿಯಿರುವ ತೆರಿಗೆ ಅಥವಾ ಅದರ ಭಾಗವನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕ ನೋಂದಾಯಿತ ವ್ಯಕ್ತಿಗಳ ಕೆಲವು ವರ್ಗಗಳನ್ನು ಅಧಿಸೂಚಿಸಬಹುದು.";

(3) ಉಪಪ್ರಕರಣ (9)ರಲ್ಲಿ,-

(ಎ) "ಅಂಥ ಲೋಪ ಅಥವಾ ತಪ್ಪು ವಿವರಗಳನ್ನು ಗಮನಿಸಿದ ಅವಧಿಯಲ್ಲಿನ ತಿಂಗಳಿಗೆ ಅಥವಾ ತ್ರೈಮಾಸಿಕಕ್ಕೆ ಒದಗಿಸಬೇಕಾಗಿರುವ ರಿಟರ್ನ್‌ನಲ್ಲಿ" ಎಂಬ ಪದಗಳಿಗೆ, "ನಿಯಮಿಸಬಹುದಾದ ಅಂಥ ನಮೂನೆ ಮತ್ತು ಅಂಥ ವಿಧಾನದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಪರಂತುಕದಲ್ಲಿ "ಹಣಕಾಸು ವರ್ಷ ಕೊನೆಗೊಂಡ" ಎಂಬ ಪದಗಳಿಗೆ, "ಅಂಥ ವಿವರಗಳಿಗೆ ಸಂಬಂಧಪಟ್ಟಿರುವ ಹಣಕಾಸು ವರ್ಷ ಕೊನೆಗೊಂಡ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**18. 43ಎ ಹೊಸ ಪ್ರಕರಣದ ಸೇರ್ಪಡೆ.**-ಮೂಲ ಅಧಿನಿಯಮದ ಪ್ರಕರಣ 43ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**43ಎ. ರಿಟರ್ನ್‌ನ್ನು ಒದಗಿಸುವ ಹಾಗೂ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳುವ ಕಾರ್ಯವಿಧಾನ.**- (1) ಪ್ರಕರಣ 16ರ ಉಪಪ್ರಕರಣ (2), ಪ್ರಕರಣ 37 ಅಥವಾ ಪ್ರಕರಣ 38ರಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ಒದಗಿಸಿದ ರಿಟರ್ನುಗಳಲ್ಲಿ, ಪೂರೈಕೆದಾರರುಗಳು ಒದಗಿಸಿದ ಪೂರೈಕೆಗಳ ವಿವರಗಳನ್ನು ಪರಿಶೀಲಿಸತಕ್ಕದ್ದು, ಸಿಂಧುಗೊಳಿಸತಕ್ಕದ್ದು, ಮಾರ್ಪಡಿಸತಕ್ಕದ್ದು ಅಥವಾ ತೆಗೆದುಹಾಕತಕ್ಕದ್ದು.

(2) ಪ್ರಕರಣ 41, ಪ್ರಕರಣ 42 ಅಥವಾ ಪ್ರಕರಣ 43ರಲ್ಲಿ ಏನೇ ಒಳಗೊಂಡಿದ್ದರೂ, ಸ್ವೀಕರಿಸುವವನಿಂದ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳುವ ಮತ್ತು ಅದರ ಪರಿಶೀಲನೆಯ ಕಾರ್ಯವಿಧಾನವು, ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಸ್ವೀಕರಿಸುವವನಿಂದ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳುವ ಉದ್ದೇಶಗಳಿಗಾಗಿ, ಪೂರೈಕೆದಾರನಿಂದ ಸಾಮಾನ್ಯ ಪೋರ್ಟಲ್‌ನಲ್ಲಿ, ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸುವ ಕಾರ್ಯವಿಧಾನವು, ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಉಪಪ್ರಕರಣ (3)ರ ಅಡಿಯಲ್ಲಿ ಒದಗಿಸಿಲ್ಲದ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ, ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳುವ ಕಾರ್ಯವಿಧಾನವು, ನಿಯಮಿಸಬಹುದಾದಂತೆ ಇರತಕ್ಕದ್ದು ಮತ್ತು ಅಂಥ ಕಾರ್ಯವಿಧಾನವು ಸದರಿ ಉಪಪ್ರಕರಣದ ಅಡಿಯಲ್ಲಿ ಪೂರೈಕೆದಾರರುಗಳಿಂದ ಒದಗಿಸಿದ ವಿವರಗಳ ಆಧಾರದ ಮೇಲೆ ಲಭ್ಯವಿರುವ ಹೂಡುವಳಿ ತೆರಿಗೆ ಜಮೆಯ ಶೇಕಡ ಇಪ್ಪತ್ತರಷ್ಟನ್ನು ಮೀರದಂತೆ ಹಾಗೆ ತೆಗೆದುಕೊಳ್ಳಬಹುದಾದ ಹೂಡುವಳಿ ತೆರಿಗೆ ಜಮೆಯ ಗರಿಷ್ಠ ಮೊತ್ತವನ್ನು ಒಳಗೊಳ್ಳಬಹುದು.

(5) ಉಪಪ್ರಕರಣ (3)ರ ಅಡಿಯಲ್ಲಿ ಪೂರೈಕೆದಾರನಿಂದ ಒದಗಿಸಲಾಗಿರುವ ಹೊರಮುಖ ಪೂರೈಕೆಗಳಲ್ಲಿ ನಿರ್ದಿಷ್ಟಪಡಿಸಿರುವ ತೆರಿಗೆಯ ಮೊತ್ತವು, ಆತನಿಂದ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಎಂದು ಭಾವಿಸತಕ್ಕದ್ದು.

(6) ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ವಿವರಗಳನ್ನು ಒದಗಿಸಲಾಗಿರುವ ಆದರೆ ಅವುಗಳಿಗಾಗಿ ರಿಟರ್ನ್‌ನ್ನು ಒದಗಿಸಲಾಗಿಲ್ಲದಿರುವ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ, ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಅಥವಾ ಸಂದರ್ಭಾನುಸಾರವಾಗಿ ತೆಗೆದುಕೊಂಡ ಹೂಡುವಳಿ ತೆರಿಗೆ ಜಮೆಯನ್ನು ಸಂದಾಯ ಮಾಡುವುದಕ್ಕೆ, ಪೂರೈಕೆದಾರ ಮತ್ತು ಸ್ವೀಕರಿಸುವವನು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು.

(7) ಉಪಪ್ರಕರಣ (6)ರ ಉದ್ದೇಶಗಳಿಗಾಗಿ, ವಸೂಲಾತಿಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮಾಡತಕ್ಕದ್ದು ಮತ್ತು ಅಂಥ ಕಾರ್ಯವಿಧಾನವು ತೆರಿಗೆಯ ಅಥವಾ ತಪ್ಪಾಗಿ ತೆಗೆದುಕೊಂಡ ಹೂಡುವಳಿ ತೆರಿಗೆ ಜಮೆಯ, ಒಂದು ಸಾವಿರ ರೂಪಾಯಿಗಳನ್ನು ಮೀರಿಲ್ಲದ ಮೊತ್ತದ ವಸೂಲಾತಿ ಮಾಡದಿರುವಿಕೆಯನ್ನು ಉಪಬಂಧಿಸಬಹುದು.

(8) ನೋಂದಾಯಿತ ವ್ಯಕ್ತಿಯಿಂದ ಉಪಪ್ರಕರಣ (3)ರ ಅಡಿಯಲ್ಲಿ ಒದಗಿಸುವ ವಿವರಗಳ, ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದ ತೆರಿಗೆಯ ಮೊತ್ತದ ಕಾರ್ಯವಿಧಾನ, ರಕ್ಷಣೋಪಾಯಗಳು ಮತ್ತು ಮೂಲಮಿತಿಯು,–

(ಎ) ನೋಂದಣಿಯನ್ನು ತೆಗೆದುಕೊಂಡ ಆರು ತಿಂಗಳ ಒಳಗಾಗಿ;

(ಬಿ) ತೆರಿಗೆಯನ್ನು ಸಂದಾಯ ಮಾಡಲು ತಪ್ಪಿರುವಲ್ಲಿ ಹಾಗು ಅಂಥ ತಪ್ಪಿಸಿದ ಮೊತ್ತವನ್ನು ಸಂದಾಯ ಮಾಡಬೇಕಿರುವ ಗಡುವು ದಿನಾಂಕದಿಂದ ಎರಡು ತಿಂಗಳುಗಳಿಗಿಂತ ಹೆಚ್ಚಾಗಿ, ಅಂಥ ತಪ್ಪಿಸುವಿಕೆಯು ಮುಂದುವರೆದಿದ್ದಾಗ,

–ನಿಯಮಿಸಬಹುದಾದಂತೆ ಇರತಕ್ಕದ್ದು".

**19. 48ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ ಪ್ರಕರಣ 48ರ, ಉಪಪ್ರಕರಣ (2)ರಲ್ಲಿ, "ರಿಟರ್ನ್‌ನನ್ನು ಒದಗಿಸುವುದಕ್ಕಾಗಿ" ಎಂಬ ಪದಗಳ ತರುವಾಯ, "ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

**20. 49ನೇ ಪ್ರಕರಣದ ತಿದ್ದುಪಡಿ.**–ಮೂಲ ಅಧಿನಿಯಮದ ಪ್ರಕರಣ 49ರಲ್ಲಿ,–

(1) ಉಪಪ್ರಕರಣ (2)ರಲ್ಲಿ, "ಪ್ರಕರಣ 41ರ", ಎಂಬ ಪದ ಮತ್ತು ಸಂಖ್ಯೆಗಳಿಗೆ, "ಪ್ರಕರಣ 41ರ ಅಥವಾ ಪ್ರಕರಣ 43ಎ ಗೆ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು;

(2) ಉಪಪ್ರಕರಣ (5)ರಲ್ಲಿ,–

(ಎ) ಖಂಡ (ಸಿ)ಯಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಏಕೀಕೃತ ತೆರಿಗೆಯನ್ನು ಸಂದಾಯ ಮಾಡಲು ಕೇಂದ್ರ ತೆರಿಗೆಯ ಖಾತೆಯಲ್ಲಿನ ಹೂಡುವಳಿ ತೆರಿಗೆ ಜಮೆಯ ಉಳಿಕೆಯು ಲಭ್ಯವಿಲ್ಲದಿದ್ದಲ್ಲಿ ಮಾತ್ರ ರಾಜ್ಯ ತೆರಿಗೆಯ ಖಾತೆಯಲ್ಲಿನ ಹೂಡುವಳಿ ತೆರಿಗೆ ಜಮೆಯನ್ನು ಏಕೀಕೃತ ತೆರಿಗೆಯ ಸಂದಾಯಕ್ಕೆ ಉಪಯೋಗಿಸತಕ್ಕದ್ದು.";

(ಬಿ) ಖಂಡ (ಡಿ)ಯಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು:–

"ಪರಂತು, ಏಕೀಕೃತ ತೆರಿಗೆಯನ್ನು ಸಂದಾಯ ಮಾಡಲು ಕೇಂದ್ರ ತೆರಿಗೆಯ ಖಾತೆಯಲ್ಲಿನ ಹೂಡುವಳಿ ತೆರಿಗೆ ಜಮೆಯ ಉಳಿಕೆಯು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಖಾತೆಯಲ್ಲಿನ ಹೂಡುವಳಿ ತೆರಿಗೆ ಜಮೆಯನ್ನು ಏಕೀಕೃತ ತೆರಿಗೆಯ ಸಂದಾಯಕ್ಕೆ ಉಪಯೋಗಿಸತಕ್ಕದ್ದು.";

**21. 49ಎ ಮತ್ತು 49ಬಿ ಹೊಸ ಪ್ರಕರಣಗಳ ಸೇರ್ಪಡೆ.**– ಮೂಲ ಅಧಿನಿಯಮದ ಪ್ರಕರಣ 49ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"49ಎ. ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಹೂಡುವಳಿ ತೆರಿಗೆ ಜಮೆಯ ಬಳಕೆ.**-ಪ್ರಕರಣ 49ರಲ್ಲಿ ಏನೇ ಒಳಗೊಂಡಿದ್ದರೂ, ಏಕೀಕೃತ ತೆರಿಗೆಯ ಖಾತೆಯಲ್ಲಿ ಲಭ್ಯವಿರುವ ಹೂಡುವಳಿ ತೆರಿಗೆ ಜಮೆಯನ್ನು ಅಂಥ ಸಂದಾಯಕ್ಕಾಗಿ ಮೊದಲು ಪೂರ್ಣವಾಗಿ ಉಪಯೋಗಿಸಿದ ತರುವಾಯ ಮಾತ್ರವೇ ರಾಜ್ಯ ತೆರಿಗೆಯ ಖಾತೆಯಲ್ಲಿನ ಹೂಡುವಳಿ ತೆರಿಗೆ ಜಮೆಯನ್ನು ಏಕೀಕೃತ ತೆರಿಗೆಯನ್ನು ಅಥವಾ ಸಂದರ್ಭಾನುಸಾರವಾಗಿ ರಾಜ್ಯ ತೆರಿಗೆಯನ್ನು ಸಂದಾಯ ಮಾಡಲು ಬಳಸತಕ್ಕದ್ದು.

**49ಬಿ. ಹೂಡುವಳಿ ತೆರಿಗೆ ಜಮೆಯ ಬಳಕೆಯ ಕ್ರಮ.**- ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಪ್ರಕರಣ 49ರ ಉಪಪ್ರಕರಣ (5)ರ ಖಂಡ (ಇ) ಮತ್ತು ಖಂಡ (ಎಫ್)ಗಳ ಉಪಬಂಧಗಳಿಗೆ ಒಳಪಟ್ಟು ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಏಕೀಕೃತ ತೆರಿಗೆಯ, ಕೇಂದ್ರ ತೆರಿಗೆಯ, ರಾಜ್ಯ ತೆರಿಗೆಯ, ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಖಾತೆಯಲ್ಲಿನ ಹೂಡುವಳಿ ತೆರಿಗೆ ಜಮೆಯನ್ನು, ಯಾವುದೇ ಅಂಥ ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿ ಬಳಸಿಕೊಳ್ಳುವ ಕ್ರಮ ಮತ್ತು ವಿಧಾನವನ್ನು ನಿಯಮಿಸಬಹುದು.".

**22. 52ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 52ರ, ಉಪಪ್ರಕರಣ (9)ರಲ್ಲಿ, "ಪ್ರಕರಣ 37ರ" ಎಂಬ ಪದ ಮತ್ತು ಅಂಕಿಗಳಿಗೆ, "ಪ್ರಕರಣ 37ರ ಅಥವಾ ಪ್ರಕರಣ 39ರ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು;

**23. 54ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 54ರಲ್ಲಿ,-

(1) ಉಪಪ್ರಕರಣ (8)ರ, ಖಂಡ (ಎ)ರಲ್ಲಿ, "ಶೂನ್ಯ-ದರದ ಪೂರೈಕೆಗಳ" ಎಂಬ ಪದಗಳಿಗೆ "ರಫ್ತುಗಳ" ಎಂಬ ಪದವನ್ನು ಮತ್ತು "ಶೂನ್ಯ-ದರದ ಪೂರೈಕೆಗಳನ್ನು" ಎಂಬ ಪದಗಳಿಗೆ "ರಫ್ತುಗಳನ್ನು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(2) ಉಪಪ್ರಕರಣ (14)ರ ಕೆಳಗಿನ ವಿವರಣೆಯಲ್ಲಿರುವ ಖಂಡ(2)ರಲ್ಲಿ,-

(ಎ) ಉಪಖಂಡ (ಸಿ)ಯಲ್ಲಿ, ಬಾಬು (i)ರಲ್ಲಿ, "ವಿದೇಶಿ ವಿನಿಮಯದಲ್ಲಿ" ಎಂಬ ಪದಗಳ ತರುವಾಯ, "ಅಥವಾ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಎಲ್ಲೆಲ್ಲಿ ಅನುಮತಿಸಲಾಗಿರುವುದೋ ಅಲ್ಲೆಲ್ಲ ಭಾರತೀಯ ರೂಪಾಯಿಗಳಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪಖಂಡ (ಇ)ಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ) ಉಪಪ್ರಕರಣ (3)ರ ಮೊದಲನೇ ಪರಂತುಕದ ಖಂಡ (ii)ರ ಅಡಿಯಲ್ಲಿ, ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯ ಸಂದರ್ಭದಲ್ಲಿ, ಅಂಥ ಮರುಪಾವತಿಗಾಗಿ ಕ್ಲೇಮು ಉದ್ಭವಿಸುವ ಅವಧಿಗಾಗಿ ಪ್ರಕರಣ 39ರ ಅಡಿಯಲ್ಲಿ ಒದಗಿಸಬೇಕಾದ ರಿಟರ್ನಿನ ಗಡುವು ದಿನಾಂಕ;".

**24. 79ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 79ರಲ್ಲಿ, ಉಪಪ್ರಕರಣ (4)ರ ತರುವಾಯ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:-

"**ವಿವರಣೆ.**- ಈ ಪ್ರಕರಣದ ಉದ್ದೇಶಗಳಿಗಾಗಿ, "ವ್ಯಕ್ತಿ" ಎನ್ನುವ ಪದವು ಪ್ರಕರಣ 25ರ ಉಪಪ್ರಕರಣ (4) ಅಥವಾ ಸಂದರ್ಭಾನುಸಾರವಾಗಿ ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾದ "ವಿಭಿನ್ನ ವ್ಯಕ್ತಿಗಳು" ಎಂಬುದನ್ನು ಒಳಗೊಳ್ಳತಕ್ಕದ್ದು."

**25. 107ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 107ರ, ಉಪಪ್ರಕರಣ (6)ರ, ಖಂಡ (ಬಿ)ಯಲ್ಲಿ, "ಉಳಿದ ಮೊತ್ತದ ಶೇಕಡಾ ಹತ್ತರಷ್ಟಕ್ಕೆ ಸಮನಾದ" ಎಂಬ ಪದಗಳ ತರುವಾಯ ", ಇಪ್ಪತ್ತೈದು ಕೋಟಿ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟ" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಸೇರಿಸತಕ್ಕದ್ದು,

**26. 112ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 112ರ, ಉಪಪ್ರಕರಣ (8)ರ ಖಂಡ (ಬಿ)ಯಲ್ಲಿ, "ಉಳಿದ ಮೊತ್ತದ ಶೇಕಡಾ ಇಪ್ಪತ್ತರಷ್ಟಕ್ಕೆ ಸಮನಾದ" ಎಂಬ ಪದಗಳ ತರುವಾಯ ", ಐವತ್ತು ಕೋಟಿ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟ" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಸೇರಿಸತಕ್ಕದ್ದು.

**27. 129ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 129ರ, ಉಪಪ್ರಕರಣ (6)ರಲ್ಲಿ, ಹಾಗೂ ಪರಂತುಕದಲ್ಲಿ "ಏಳು ದಿನಗಳ" ಎಂಬ ಪದಗಳಿಗಳಿಗೆ ಅವು ಇರುವ ಎರಡೂ ಕಡೆಗಳಲ್ಲಿ "ಹದಿನಾಲ್ಕು ದಿನಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**28. 143ನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ಪ್ರಕರಣ 143ರ, ಉಪಪ್ರಕರಣ (1)ರ, ಖಂಡ (ಬಿ) ಯಲ್ಲಿ, ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ಒಂದು ವರ್ಷ ಹಾಗೂ ಮೂರು ವರ್ಷಗಳ ಅವಧಿಯನ್ನು, ತೋರಿಸಲಾದ ಸಾಕಷ್ಟು ಕಾರಣಗಳಿಗಾಗಿ, ಆಯುಕ್ತರಿಂದ ಕ್ರಮವಾಗಿ ಒಂದು ವರ್ಷ ಹಾಗೂ ಎರಡು ವರ್ಷಗಳನ್ನು ಮೀರದ ಹೆಚ್ಚಿನ ಅವಧಿಗಾಗಿ ವಿಸ್ತರಣೆಗೊಳ್ಳಬಹುದು.".

**29. ಅನುಸೂಚಿ–Iರ ತಿದ್ದುಪಡಿ.**–ಮೂಲ ಅಧಿನಿಯಮದ ಅನುಸೂಚಿ–Iರ, ಕಂಡಿಕೆ 4ರಲ್ಲಿ, "ತೆರಿಗೆದಾಯಕ ವ್ಯಕ್ತಿಯು" ಎಂಬ ಪದಗಳಿಗೆ "ವ್ಯಕ್ತಿಯು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**30. ಅನುಸೂಚಿ–IIರ ತಿದ್ದುಪಡಿ.**–ಮೂಲ ಅಧಿನಿಯಮದ ಅನುಸೂಚಿ–IIರ, ಶೀರ್ಷಿಕೆಯಲ್ಲಿ, "ಚಟುವಟಿಕೆಗಳು" ಎಂಬ ಪದದ ತರುವಾಯ "ಅಥವಾ ವ್ಯವಹಾರಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು ಮತ್ತು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರುವಂತೆ ಸೇರಿಸಲಾಗಿರುವುದೆಂದು ಭಾವಿಸತಕ್ಕದ್ದು.

**31. ಅನುಸೂಚಿ– ರ ತಿದ್ದುಪಡಿ.**–ಮೂಲ ಅಧಿನಿಯಮದ ಅನುಸೂಚಿ–IIIರಲ್ಲಿ,–

(1) ಖಂಡಿಕೆ 6ರ ತರುವಾಯ ಆದರೆ ವಿವರಣೆಗಿಂತ ಮೊದಲು ಈ ಮುಂದಿನ ಕಂಡಿಕೆಗಳನ್ನು ಸೇರಿಸತಕ್ಕದ್ದು, ಎಂದರೆ:–

"7. ಸರಕುಗಳು ಭಾರತದೊಳಗೆ ಪ್ರವೇಶಿಸದೇ, ಭಾರತದ ಹೊರಗಿನ ಒಂದು ಸ್ಥಳದಿಂದ ಭಾರತದ ಹೊರಗಿನ ಮತ್ತೊಂದು ಸ್ಥಳಕ್ಕೆ ಅಂಥ ಸರಕುಗಳ ಪೂರೈಕೆ.

8. (ಎ) ದೇಶೀಯ ಬಳಕೆಗಾಗಿ ತೀರುವೆಯಾಗುವುದಕ್ಕೆ ಮುಂಚಿತವಾಗಿ, ಯಾವುದೇ ವ್ಯಕ್ತಿಗೆ ಉಗ್ರಾಣಿತ ಸರಕುಗಳ ಪೂರೈಕೆ;

(ಬಿ) ಭಾರತದ ಹೊರಗಿನ ಮೂಲಬಂದರಿನಿಂದ ಸರಕುಗಳು ರವಾನೆಯಾದ ನಂತರ, ಆದರೆ ದೇಶೀಯ ಬಳಕೆಗಾಗಿ ತೀರುವೆಯಾಗುವುದಕ್ಕೆ ಮುಂಚಿತವಾಗಿ, ಸರಕುಗಳ ಸ್ವಾಮ್ಯದ ದಸ್ತಾವೇಜುಗಳ ಹಿಂಬರಹದ ಮೂಲಕ ರವಾನೆದಾರನಿಂದ ಯಾವುದೇ ಇತರ ವ್ಯಕ್ತಿಗೆ ಸರಕುಗಳ ಪೂರೈಕೆ.";

(2) ವಿವರಣೆಗೆ "**ವಿವರಣೆ 1**" ಎಂದು ಸಂಖ್ಯೆ ನೀಡತಕ್ಕದ್ದು, ಮತ್ತು ಹಾಗೆ ಸಂಖ್ಯೆ ನೀಡಲಾದ ವಿವರಣೆ 1ರ ತರುವಾಯ, ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು :–

"**ವಿವರಣೆ 2.**– ಖಂಡಿಕೆ 8ರ ಉದ್ದೇಶಗಳಿಗಾಗಿ, "ಉಗ್ರಾಣಿತ ಸರಕುಗಳು" ಎಂಬ ಪದಾವಳಿಯು ಸೀಮಾಸುಂಕಗಳ ಅಧಿನಿಯಮ, 1962ರಲ್ಲಿ (1962ರ ಕೇಂದ್ರ ಅಧಿನಿಯಮ 52) ಇದಕ್ಕೆ ನೀಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು."

**32. ನಿರಸನ ಮತ್ತು ಉಳಿಸುವಿಕೆಗಳು.**– (1) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2018ನ್ನು ಈ ಮೂಲಕ ನಿರಸನಗೊಳಿಸಿದೆ.

(2) ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಅಡಿಯಲ್ಲಿ ಕೈಗೊಳ್ಳಲಾದ ಯಾವುದೇ ಕಾರ್ಯ ಅಥವಾ ಯಾವುದೇ ಕ್ರಿಯೆಯನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಅಡಿಯಲ್ಲಿ ಕೈಗೊಳ್ಳಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 500